ಇ) 2008–09ನೇ ಸಾಲಿನಲ್ಲಿ ನೇಮಕಾತಿ ಮಾಡಲಾಗಿರುವ ಸಂಖ್ಯೆ ಎಷ್ಟು (ವಿವರ ನೀಡುವುದು);

ಈ) PCM/CBZ (ಪಿಸಿಎಂ/ಸಿಬಿಝಡ್) ಆದವರಿಗೆ ಪ್ರಾಥಮಿಕ ಶಾಲೆಗಳಲ್ಲಿ ನೇಮಿಸಿದಂತೆ ಶಾಲಾ ಶಿಕ್ಷಕರನ್ನು ಪ್ರಾಥಮಿಕ ಶಾಲೆಗಳಲ್ಲಿ ನೇಮಿಸಲು ಸರ್ಕಾರ ಚಿಂತಿಸಿದೆಯೇ; ಚಿಂತಿಸಿದ್ದಲ್ಲಿ, ಯಾವಾಗ ನೇಮಕ ಮಾಡಲಾಗುವುದು;

- ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ವಿಜ್ಞಾನ ಶಿಕ್ಷಕರು ಇರುತ್ತಾರೆ.
- ಸರ್ಕಾರಿ ಪ್ರೌಢಶಾಲೆಗಳಿಗೆ ಪಿಸಿಎಂ ಮತ್ತು ಸಿಬಿಝಡ್ ಶಿಕ್ಷಕರನ್ನು ಸಹ ನೇಮಕ ಮಾಡಲಾಗುತ್ತಿದೆ. ಸರ್ವ ಶಿಕ್ಷಣ ಅಭಿಯಾನದಡಿ ಉನ್ನತೀಕರಿಸಿದ ಸರ್ಕಾರಿ ಪ್ರಾಥಮಿಕ ಶಾಲೆಗಳಿಗೆ (8ನೇ ತರಗತಿ) 5356 ಪಿಸಿಎಂ ಶಿಕ್ಷಕರನ್ನು ನೇಮಕಾತಿ ಮಾಡಲಾಗಿದೆ.

ಉ) ಸರ್ಕಾರ ಪ್ರಸಕ್ತ ಸಾಲಿನಲ್ಲಿ ಹೊಸದಾಗಿ ಸರ್ಕಾರಿ ಪ್ರೌಢಶಾಲೆ/ಪದವಿ ಪೂರ್ವ ಕಾಲೇಜುಗಳನ್ನು ನೂತನವಾಗಿ ಆರಂಭಿಸುವ ಬಗ್ಗೆ ಸರ್ಕಾರದ ನಿರ್ಧಾರಗಳೇನು (ವಿವರ ನೀಡುವುದು);

- ಸರ್ಕಾರಿ ಪ್ರೌಢಶಾಲೆಗಳನ್ನು ಪ್ರಾರಂಭಿಸಲು ಬೇಡಿಕೆ ಪ್ರಸ್ತಾವನೆಗಳನ್ನು ಪರಿಶೀಲಿಸಲಾಗುವುದು.
- ಶೈಕ್ಷಣಿಕ ವರ್ಷ ಪ್ರಾರಂಭವಾಗಿರುವುದರಿಂದ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲಾಗುತ್ತಿಲ್ಲ.

ಊ) ನೂತನ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶೈಕ್ಷಣಿಕ ವರ್ಷ ಪ್ರಾರಂಭವಾಗಿರುವುದರಿಂದ ನೂತನ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲಾಗುತ್ತಿಲ್ಲ.

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (330)312
2) ಸದಸ್ಯರ ಹೆಸರು : ಶ್ರೀ.ಕೃಷ್ಣಮೂರ್ತಿ ಕೆ.ಎಂ.
3) ಉತ್ತರಿಸುವ ಸಚಿವರು : (ಶ್ರೀ ರೇವುನಾಯಕ್ ಬೆಳಮಗಿ)
: ಮಾನ್ಯ ಪಶುಸಂಗೋಪನೆ ಸಚಿವರು

ಅ) ಅಮೃತಮಹಲ್ ಕಾವಲ್ ನಲ್ಲಿ ಅನೇಕರು ಅತಿಕ್ರಮ ಸಾಗುವಳಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಹೌದು. ಅಮೃತಮಹಲ್ ಕಾವಲಿನಲ್ಲಿ ಅತಿಕ್ರಮ ಸಾಗುವಳಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಹಾಗಿದ್ದಲ್ಲಿ ಇದನ್ನು ರಕ್ಷಿಸಲು ತೆಗೆದುಕೊಂಡ ಕ್ರಮಗಳೇನು

ಇ) ಅಕ್ರಮವಾಗಿ ಸಾಗುವಳಿ ಮಾಡುತ್ತಿರುವವರ ವಿರುದ್ಧ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಈ ಹಿಂದೆ ಹಲವು ಬಾರಿ ಅಮೃತ ಮಹಲ್ ಕಾವಲ್ ಪ್ರದೇಶದಲ್ಲಿ ಉಂಟಾಗಿರುವ ಒತ್ತುವರಿ ಹಾಗೂ ಬಗರು ಸಾಗುವಳಿ ತೆರೆವುಗೊಳಿಸಿ ಕೊಡಲು ಕಂದಾಯ ಇಲಾಖೆ ಹಾಗೂ ಅರಕ್ಷಕ ಇಲಾಖೆಗೆ ಕೋರಿಕೊಂಡ ಪ್ರಕಾರ ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ ಇವರು ಅವರ ಪತ್ರ ಸಂಖ್ಯೆ ಕಂ.ಇ:40/ಸಿ.ಜಿ.ಪಿ/2006 ದಿನಾಂಕ 06-09-2006ರ ಆದೇಶದಂತೆ ಕಂದಾಯ ಇಲಾಖೆ ಹಾಗೂ ಪಶು ಪಾಲನಾ ಇಲಾಖೆಯ ಜಂಟಿ ಸಹಯೋಗದಲ್ಲಿ ಅಮೃತಮಹಲ್ ಕಾವಲುಗಳ ಒತ್ತುವರಿ ಸಮೀಕ್ಷಾ ಕಾರ್ಯ ಪ್ರಗತಿಯಲ್ಲಿರುತ್ತದೆ. ಹಾಸನ, ಮಂಡ್ಯ, ತುಮಕೂರು, ಚಿತ್ರದುರ್ಗ, (ಹೊಳಲ್ಕೆರೆ ತಾಲ್ಲೂಕು ಹೊರತುಪಡಿಸಿ) ಹಾಗೂ ದಾವಣಗೆರೆ ಜಿಲ್ಲೆಗಳಲ್ಲಿನ ಅಮೃತಮಹಲ್ ಕಾವಲುಗಳ ಒತ್ತುವರಿ ಸಮೀಕ್ಷಾ ವರದಿ ಬಂದಿರುವುದಿಲ್ಲ.

ಈ ಎಲ್ಲಾ ಕಾವಲುಗಳ ಒತ್ತುವರಿ ಸಮೀಕ್ಷಾ ವರದಿ ಬಂದ ನಂತರ ಈ ರೀತಿಯ ಒತ್ತುವರಿಯನ್ನು ತೆರೆವುಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಕರ್ನಾಟಕ ಉಚ್ಚ ನ್ಯಾಯಾಲಯದ ತೀರ್ಪು ಸಂಖ್ಯೆ 17954/2001 ರ ರೀತ್ಯಾ ಅಮೃತಮಹಲ್ ಕಾವಲುಗಳಲ್ಲಿನ ಒತ್ತುವರಿಯನ್ನು ತೆರೆವುಗೊಳಿಸಲು ಆದೇಶವಿರುವುದರಿಂದ ಒತ್ತುವರಿ ಸಮೀಕ್ಷಾ ಕಾರ್ಯ ಪ್ರಗತಿಯಲ್ಲಿರುತ್ತದೆ. ಅಂತಿಮ ವರದಿ ಬಂದ ನಂತರ ಒತ್ತುವರಿ ತೆರವುಗೊಳಿಸಲು ಸರ್ಕಾರದ ಮಟ್ಟದಲ್ಲಿ ಕ್ರಮಕೈಗೊಳ್ಳಬೇಕಾಗುತ್ತದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (494)313
ಸದಸ್ಯರ ಹೆಸರು : ಶ್ರೀ ಕೃಷ್ಣಮೂರ್ತಿ ಕೆ.ಎಂ. (ಕಡೂರು),
ಉತ್ತರಿಸುವ ಸಚಿವರ ಹೆಸರು : (ಶ್ರೀ ಎಸ್.ಎಂ.ಕೃಷ್ಣಯ್ಯ ಶೆಟ್ಟಿ)
: ಮಾನ್ಯ ವಸತಿ ಹಾಗೂ ಮುಜರಾಯಿ ಸಚಿವರು

ಅ) ವಸತಿ ಯೋಜನಾ ಸೌಲಭ್ಯ ಕಲ್ಪಿಸಲು ಮಹಿಳಾ ಅಭ್ಯರ್ಥಿಗಳ ಹೆಸರಿನಲ್ಲಿ ಖಾತೆ ಇರಬೇಕೆಂದು ಸರ್ಕಾರದ ಆದೇಶವಿದೆಯೆ; ಹಾಗಿದ್ದಲ್ಲಿ ಆದೇಶದ ಪ್ರತಿ ನೀಡುವುದು;

ಹೌದು (ಪ್ರತಿ ಲಗತ್ತಿಸಿದೆ).

ಆ) ಕೇಂದ್ರ; ರಾಜ್ಯ ಸರ್ಕಾರವು ಶೇ33 ಮಹಿಳಾ ಮೀಸಲಾತಿ ನೀಡುತ್ತಿರುವಾಗ, ಮಹಿಳಾ ಫಲಾನುಭವಿ ಹೆಸರಿನಲ್ಲಿ ಕಡ್ಡಾಯ ಖಾತೆ ಇರಬೇಕೆಂಬ ನಿಯಮಾವಳಿಗೆ ಅರ್ಥವೇನು;